**ಈ ನಲವತ್ತು ವರ್ಷದಲ್ಲಿ ಯಾವತ್ತೂ ಗಂಡನಿಗೆ ಎದರು ಮಾತಾಡದವಳು, ಬದಲುಹೇಳದವಳು ಇವತ್ತು ಗಂಡನಿಗೆ ಎದುರಾಗಿ ಕೋರ್ಟ್‌ನಲ್ಲಿ ನಿಂತು, ನನ್ನ ಗಂಡ ಸರಿಯಿಲ್ಲ, ಮೋಸಗಾರ ಎಂದೆಲ್ಲಾ ಹೇಳಬೇಕಲ್ಲ ಅಂತ ನೆನೆದು ಸಂಕಟವಾಯ್ತು. ಗಂಡನ ದೃಷ್ಟಿ ಎದುರಿಸಲಾಗದೆ ತತ್ತರಿಸಿ ನಿಂತಲ್ಲೇ ಕುಸಿದು ಬೀಳುವಂತಾಗಿ ಪಕ್ಕದಲ್ಲೇ ನಿಂತಿದ್ದ ಮಗಳನ್ನು ಶಾರದಮ್ಮ ಬಲವಾಗಿ ಹಿಡಿದುಕೊಂಡರು.**

ಅದು ಬೇರೆಯವರಿಗೆ ಹುಟ್ಟಿದ್ದ್ರೆ ಅನ್ಯಾಯವಾಗಿ ನಮ್ಮ ಆಸ್ತಿ ಕಂಡವರ ಪಾಲಾಯ್ತದಲ್ಲ. ಶೋಭಾ ಹುಟ್ಟಿದ ಮೇಲೆ ಎರಡು ಮಕ್ಳು ಒಂದು ಗಂಡು ಒಂದು ಹೆಣ್ಣು ಹುಟ್ಟಿ ಸತ್ತೋದು. ಇವರಿಗೆ ಒಂದು ಗಂಡು ಬೇಕು ಅಂತ ಆಸೆ ಆದರೆ ಆಮೇಲೆ ನನಗೆ ಬಸರು ನಿಲ್ಲಲೇ ಇಲ್ಲ. ಈಗ ಆ ಬೋಸುಡಿಗೆ ಹೆಂಗೆ ಬಸರು ನಿಲ್ತು? ಊರು ಮಾತಾಡ್ಕೊಳ್ಳೋದು ನಿಜ ಇರಬೇಕು. ಲೌಡಿ ಯಾರಿಗೆ ಬಸುರಾಗಿದ್ದಾಳೋ ಇವರಿಗೆ ನಿಮಗೆ ಬಸುರಾಗಿದ್ದು ಅಂತ ನಂಬಿಸವಳೇ. ಇವರು ಈ ವಯಸ್ಸಲ್ಲಿ ಮಗ ಹುಟ್ಟಿಸಿದ್ದೀನಿ, ಅದರಲ್ಲೂ ಗಂಡು ಮಗನ್ನ ಅಂತ ಬೀಗ್ತಾವರೆ. ಜನ ಹಿಂದೆ ನಗೋದು ಇವರಿಗೆ ಕಾಣಿಸಲ್ಲ. ಈಗ ಶೋಭ ಯಜಮಾನರು ಕೋರ್ಟು ಕೇಸು ಅಂತಾವರೆ. ಇದೆಲ್ಲಾ ಎಲ್ಲಿಗೆ ಹೋಗಿ ಮುಟ್ಟುತ್ತೋ ಸಿವನೆ, ಅಂತ ಶಾರದಮ್ಮ ಚಿಂತೆಯಲ್ಲಿ ಮುಳಗಿಯೇ ಹೋದ್ರು.

ಮಗನನ್ನ ತೊಡೆಯ ಮೇಲೆ ಕೂರಿಸಿಕೊಂಡು ಮುದ್ದೆಯ ತುತ್ತು ಮುರಿದು ಹಿತಕವರೆ ಸಾರಿನಲ್ಲಿ ಹೊರಳಿಸಿ ಉಣ್ಣುತ್ತಿದ್ದ ತಿಮ್ಮೇಟಯ್ಯ, ಸುನಂದಾ ಒಳಗಿನಿಂದ ಹೆಸರುಬೇಳೆ ಪಾಯಸ ತಂದಾಗ ಅದರ ಘಮಲು ಹಿಡಿದು ಇದೇನೇ ಪಾಯಸ ಮಾಡಿದ್ದೀಯ, ಏನು ವಿಶೇಷ ಅಂತ ಕೇಳಿದ. ಸುನಂದಾ ಈವತ್ತು ನಮ್ಮ ಕೃಷ್ಣ ಹೊಸಲ ದಾಟಿದ ಅಂದಳು. ಅಲಲಲೇ ನಮ್ಮಹುಡುಗ ಆಗಲೇ ಹೊಸಲು ದಾಟಂಗ ಆಗಹೋದ್ನ ಅಂತ ತಿಮ್ಮೇಟಯ್ಯ ಖುಷಿಯಾಗಿ ಸುನಂದಾ ಲೋಟದಲ್ಲಿ ತುಂಬಿಕೊಟ್ಟ ಪಾಯಸಕ್ಕೆ ತೋರುಬೆರಳದ್ದಿ ಆ ಬೆರಳನ್ನು ಮಗನ ಬಾಯಿಗಿಟ್ಟಾಗ ಆ ಮಗು ನಾಲಗೆಗೆ ತಾಕಿದ ಸಿಹಿಯಿಂದ ತುಟಿ ಅರಳಿಸಿ ನಕ್ಕಿತು. ಆ ನಗುವನ್ನು ನೋಡಿ ತಿಮ್ಮೇಟಯ್ಯ ಮಗುವನ್ನ ಅವುಚಿಕೊಂಡು ಲೊಚಕ್ಕನೆ ಅದರ ಕೆನ್ನೆ ಮುದ್ದಿಸಿದ. ತಾನು ಹೇಳಬೇಕಾದ್ದನ್ನ ಹೇಳಲು ಇದೇ ತಕ್ಕ ಸಮಯವೆಂದು ಭಾವಿಸಿ ಸುನಂದಾ ಊರಿನ ಜನ ಏನೇನೋ ಮಾತಾಡ್ತವರಂತೆ ಅಂದ್ಲು. ಲೌಡಿಮಕ್ಳು ಏನಾದ್ರು ಮಾತಾಡ್ಲಿ ನೀನು ಕಿವಿಮೇಲೇ ಬಿದ್ದಿಲ್ಲ ಅನ್ನೋಹಂಗೆ ಸುಮ್ಮನಿರು ಅಂದ ತಿಮ್ಮೇಟಯ್ಯ. ನೋಡಿ ನೀವು ನನಗೆ ನನ್ನ ಮಗಂಗೆ ಯಾವ ಆಸ್ತೀನು ಬರೀಬೇಡಿ. ನೀವು ನಮ್ಮ ಕೈ ಬಿಡದಿದ್ರೆ ಸಾಕು. ನನಗೆ ಯಾವ ಆಸ್ತಿ ಆಸೆನೂ ಇಲ್ಲ ಅಂದ್ಲು. ನನ್ನ ಆಸ್ತಿ ನನ್ನ ಮಗನಿಗಲ್ದೆ ಇನ್ಯಾರಿಗೆ ಕೊಡಲಿ ನೀನು ಸುಮ್ಮಕಿರೆ ಎಂದ ಗಂಡನಿಗೆ, ನಿಮ್ಮ ಮಗಳು ಅಳಿಯ ನಿಮ್ಮ ಮೇಲೆ ಕೇಸ್ ಹಾಕ್ತಾರಂತೆ; ಈ ಮೊಗ ನಿಮಗ್ ಹುಟ್ಟಿಲ್ಲ ಅದೆಂಗೆ ಆಸ್ತಿ ಕೊಡ್ತಾನೆ ಅಂತ ನಿಮ್ಮ ಅಳಿಯ ಎಲ್ಲಾ ಕಡೆ ಹೇಳಕೊಂಡು ತಿರುಗತಾವರೆ ಎಂದಳು ಸುನಂದಾ. ಈ ಮಗ ನನಗ ಹುಟ್ಟಿಲ್ದೆ ಅವನಿಗೆ ಹುಟ್ಟಿದ್ದದಂತ, ನನ್ನ ಮುಂದು ಈ ಮಾತು ಹೇಳಲಿ ಆ ಲೌಡಿ ಮಗ ಅವನ ತೊಲ್ಡ್ ಕದರೋಗಂಗೆ ಒದಿತೀನಿ ಎಂದು ತಿಮ್ಮೇಟಯ್ಯ. ಸಿಟ್ಟಿನಿಂದ ಕನಲಿಕೆಂಡವಾದ ಈ ಬಿಸಿ ಅವನ ತೊಡೆಯಮೇಲಿದ್ದ ಎಳೆಮಗುವಿಗೂ ತಾಕಿ ಅದು ಅಳಲಾರಂಭಿಸಿತು.